## 1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 973/2014

**ಸಾಕ್ಷಿಯನ್ನು ದಿಃ 06.03.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಜಿ. ಉದಯರವಿ | ಸಿಡಬ್ಲ್ಯೂ:15 | ಪಿಡಬ್ಲ್ಯೂ:3 |
| ತಂದೆಯ ಹೆಸರು | ಹೆಚ್. ಎಂ. ಗಂಗಾಧರಯ್ಯ | | |
| ವಯಸ್ಸು | 45 ವರ್ಷ | | |
| ಕೆಲಸ | ಪಿ.ಐ ಬೆಂಗಳೂರಿನ ಶಂಕರಾಪುರ ಪೊಲೀಸ್ ಠಾಣೆ | | |
| ವಾಸಸ್ಥಳ | ಬೆಂಗಳೂರು | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ದಿಃ 06.06.2010 ರಿಂದ ದಿಃ 12.06.2012 ರ ವರೆಗೆ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ.ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 08.07.2010 ರಂದು ನಾನು ಠಾಣಾ ಉಸ್ತುವಾರಿಯಲ್ಲಿದ್ದಾಗ ಮಧ್ಯಾಹ್ನ 3.40 ರ ಸಮಯದಲ್ಲಿ ಚಾಸಾ 1 ರವರು ಕರೆ ಮಾಡಿ ಅವರ ಕಛೇರಿಗೆ ಬರುವಂತೆ ತಿಳಿಸಿದ್ದು, ನಂತರ ಅವರ ಕಛೇರಿಗೆ ಹೋದಾಗ ಚಾಸಾ 14, 16 ಮತ್ತು 17 ರವರ ಸಮಕ್ಷಮ ಮತ್ತು ಪಂಚರಾದ ಚಾಸಾ 2 ಮತ್ತು 3 ರವರ ಸಮಕ್ಷಮ ಹುಣಸೂರಿನ ರಾಜಧಾನಿ ಡಿಲೆಕ್ಸ್ ಲಾಡ್ಜ್ ನಲ್ಲಿ ಅಕ್ರಮವಾಗಿ ಹಣ ಗಳಿಸುವ ಉದ್ದೇಶದಿಂದ ವೈಷ್ಯಾವಾಟಿಕೆ ನಡೆಯುತ್ತಿದೆ ಎಂಬ ಮಾಹಿತಿ ಬಂದಿದ್ದು, ದಾಳಿ ಮಾಡೋಣ ಎಂದು ತಿಳಿಸಿದ ಮೇರೆಗೆ

ನಾನು ಮತ್ತು ಮೇಲ್ಕಂಡ ಅಧಿಕಾರಿಗಳು ಮತ್ತು ಪಂಚರ, ಡಿ.ಎಸ್.ಪಿ ಕಛೇರಿಯಿಂದ ಹೊರಟು ಸುಮಾರು ಸಂಜೆ 4.00 ಗೆ ಹೊರಟು ರಾಜಧಾನಿ ಡಿಲೆಕ್ಸ್ ಲಾಡ್ಜ್ ಬಳಿ 3 ಮಹಡಿಗೆ ಒಟ್ಟಿಗೆ ಹೋಗಿ ನೋಡಲಾಗಿ ರೂಮ್ 110 ರಲ್ಲಿ ಇಬ್ಬರು ಆಸಾಮಿಗಳು ನಿಂತಿದ್ದು, ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನ ಪಟ್ಟವರಲ್ಲಿ ಒಬ್ಬರನ್ನು ಹಿಡಿದು ಕೇಳಲಾಗಿ ಅವರ ಹೆಸರು ಕುಮಾರ, ಬಿಲ್ ಗ್ರಾಮ, 26 ವರ್ಷ, ಹಾಗೂ ಓಡಿ ಹೋದ ಹೋದ ವ್ಯಕ್ತಿ ಪ್ರದೀಪ್ ಮೈಸೂರು ಎಂದು ತಿಳಿಸಿದ್ದರು.

ನಂತರ ನಾವು ವಿಚಾರ ಮಾಡಲಾಗಿ ಅಕ್ರಮಾಗಿ ಹಣ ಗಳಿಸುವ ಉದ್ದೇಶದಿಂದ ಮಹಿಳೆಯನ್ನು ಬಳಸಿಕೊಂಡು ವೈಷ್ಯಾವಾಟಿಕೆ ದಂಧೆ ನಡೆಸುತ್ತಿದ್ದನ್ನು ಒಪ್ಪಿಕೊಂಡಿದ್ದು, ರೂಮ್ 110 ರಲ್ಲಿ ಒಬ್ಬ ಮಹಿಳೆ ಮತ್ತು ಒಬ್ಬ ಪುರುಷ ಇರುವುದಾಗಿ ತಿಳಿಸಿದರು. ಸದರಿ ರೂಮ್ ಬೀಗ ಕುಮಾರ ಎಂಬುವವರ ಬಳಿ ಇದೆ ಎಂದು ತಿಳಿಸಿದ್ದು, ಸದರಿ ಬೀಗವನ್ನು ತೆಗೆಸಿ ನೋಡಲಾಗಿ, ಒಬ್ಬ ಮಹಿಳೆ ಮತ್ತು ಪುರುಷರು ಅರೆ ನಗ್ನ ಸ್ಥಿತಿಯಲ್ಲಿ ಇದ್ದ ಮಹಿಳೆ ಹೆಸರು ಅಶ್ವಿನಿ ತಂದೆ ಬಸವರಾಜು, ತಣ್ಣೀರಹಳ್ಳಿ ಹಾಸನ ಹಾಗೂ ಪುರುಷ ನಾಗೇಂದ್ರ ಬಿನ್ ಚಂದ್ರೇಗೌಡ, 30 ವರ್ಷ, ದೊಡ್ಡ ಮಸೀದಿ ಬೀದಿ, ಹುಣಸೂರು ಎಂದು ತಿಳಿಸಿದ್ದರು. ವಶಕ್ಕೆ ಪಡೆದ ಅಶ್ವಿನಿ ರವರನ್ನು ವಿಚಾರಿಸಲಾಗಿ ಲಾಡ್ಜ್ ಮ್ಯಾನೇಜರ್ ಪ್ರದೀಪ್ ತಮಗೆ ಅಕ್ರಮವಾಗಿ ವೈಷ್ಯಾವಾಟಿಕೆಯಲ್ಲಿ ತೋಡಗಿ ಹಣ ನೀಡಿದಾಗ ಬಂದು ಈ ದಂಧೆಯಲ್ಲಿ ತೊಡಗಿಸಿ ಕೊಳ್ಳುತ್ತೇವೆ ಎಂದು ಹೇಳಿಕೆ ನೀಡಿದ್ದರು ಸದರಿ ಮಹಿಳೆ ಹತ್ತಿರ ಇದ್ದ 1200/- ರೂ. ಹಾಗೂ ನಗೇಂದ್ರ ರವರ ಬಳಿ ಇದ್ದ 4300/- ರೂ, ಕುಮಾರ್ ನ ಬಳಿ ಇದ್ದ 6500/- ರೂ. ಹಣವನ್ನು ಹಾಗೂ ಒಂದು ಮಂಚ, ಒಂದು ಹಾಸಿಗೆ ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಳ್ಳಲಾಯಿತು. ಸದರಿ ಅಮಾನತ್ತು ಪಂಚನಾಮೆಯನ್ನು ಸಂಜೆ 4.30 ರಿಂದ 5.30 ವರೆಗೆ ಬರೆದು ಪಂಚರ ಸಹಿ ಪಡೆದು ನಾನು ಸಹಿ ಮಾಡಿರುತ್ತೇನೆ. ಸದರಿ ಅಮಾನತ್ತು ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೆ ನಿಪಿ. 1 ಎಂದು ಗುರುತಿಸಲಾಗಿದೆ.

ನಂತರ ವಶಕ್ಕೆ ಪಡೆದ ಮಹಿಳೆಯನ್ನು ಮತ್ತು ನಾಗೇಂದ್ರ ರವರು ಪಂಚರೊಂದಿಗೆ ಠಾಣೆಗೆ ವಾಪಸ್ಸಾಗಿ ಚಾಸಾ 1 ರವರು ವರದಿಯನ್ನು ತಯಾರಿಸಿ ಠಾಣಾಧಿಕಾರಿ ಚಾಸಾ 18 ರವರಿಗೆ ನೀಡಿರುತ್ತಾರೆ. ಆರೋಪಿ ಪ್ರದೀಪ್ ನನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀಸವಾಲುಃ ಆರೋಪಿ ತಲೆ ಮರೆಸಿಕೊಂಡಿರುತ್ತಾನೆ.**

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.